ಆರ್‌ಬಿಐ / 2005–06 / 48
ಆರ್‌ಪಿಸಿಡಿ.ಸಿಒ.ಆರ್‌ಎಫ್.ಬಿಸಿ .ಸಂಖ್ಯೆ 12 / 07 .38.01 / 2005–06
ಜುಲೈ 12, 2005

**ಅಧ್ಯಕ್ಷರು / ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು**
**ಎಲ್ಲಾ ರಾಜ್ಯ ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು**

ಮಾನ್ಯರೆ

**ಮೃತ ಠೇವಣಿದಾರರ ಸಂಬಂಧದಲ್ಲಿ ಕ್ಲೇಮುಗಳನ್ನು ಚುಕ್ತಾ ಮಾಡುವುದು – ಪ್ರಕ್ರಿಯೆಯ ಸರಳೀಕರಣ**

ನವೆಂಬರ್ 3, 2003 ರಂದು ಆರ್‌ಬಿಐ ನ ವಾರ್ಷಿಕ ನೀತಿಯ ಮಧ್ಯಕಾಲೀನ ಪರಿಶೀಲನೆಯ ಸಂದರ್ಭದಲ್ಲಿ ನೀಡಿದ ಪ್ರಕಟಣೆಗೆ ಅನುಸಾರವಾಗಿ, ಸಾಮಾನ್ಯ ಮನುಷ್ಯನಿಗೆ ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಉತ್ತಮಪಡಿಸುವ ದೃಷ್ಟಿಯಿಂದ ಆರ್‌ಬಿಐ ಸಾರ್ವಜನಿಕ ಸೇವೆಗಳ ಕುರಿತ ಪ್ರಕ್ರಿಯೆ ಮತ್ತು ಸಾಧನೆ ಪರಿಶೋಧನಾ ಸಮಿತಿಯನ್ನು (ಸಿಪಿಪಿಎಪಿಎಸ್) ರಚಿಸಿತ್ತು. ಬ್ಯಾಂಕಿಂಗ್ ವ್ಯವಹಾರಗಳು ಠೇವಣಿ ಖಾತೆಗಳು ಮತ್ತು ವ್ಯಕ್ತಿಗಳಿಗೆ (ವ್ಯವಹಾರೇತರ) ಸಂಬಂಧಿಸಿದ ಇತರ ಸೇವೆಗಳು ಕುರಿತ ತನ್ನ ವರದಿ ಸಂಖ್ಯೆ 3 ರಲ್ಲಿ ಸಮಿತಿಯು ವಿಶೇಷವಾಗಿ ಮೃತ ಠೇವಣಿದಾರನ ಕುಟುಂಬಕ್ಕೆ ಅನ್ವಯವಾಗುವಂಥ ತ್ರಾಸದಾಯಕ ಪ್ರಕ್ರಿಯೆಯಿಂದಾಗಿ ಅಂಥ ಕುಟುಂಬದ ಸದಸ್ಯರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದೆ. ನಮ್ಮ ಸುತ್ತೋಲೆಗಳಾದ ಆರ್ ಪಿ ಸಿ ಡಿ. ಸಿಒ. ಸಂಖ್ಯೆ ಆರ್ ಎಫ್ ಬಿ ಸಿ. 09/07.38.01 / 2000–2001 ದಿನಾಂಕ ಆಗಸ್ಟ್ 22, 2000 ದ ಮತ್ತು ಆರ್ ಪಿಸಿಡಿ .ಸಿಒ ಸಂಖ್ಯೆ ಆರ್ ಎಫ್. ಬಿ ಸಿ . 59 / 07.28.01 / 2000–2001 ದಿನಾಂಕ ಫೆಬ್ರವರಿ 27, 2001ರ ಪ್ರಕಾರ ಮೃತ ಠೇವಣಿದಾರರುಗಳ ಕ್ಲೇಮುಗಳನ್ನು ಚುಕ್ತಾ ಮಾಡುವ ಸಂಬಂಧ ಬ್ಯಾಂಕುಗಳಿಗೆ ಸೂಚನೆಗಳನ್ನು ನೀಡುವಾಗ ಸಿಪಿಪಿಎಪಿಎಸ್‌ನ ಶಿಫಾರಸುಗಳ ಹಿನ್ನಲೆಯಲ್ಲಿ ಈಗಿನ ವ್ಯವಸ್ಥೆಯನ್ನು ಪುನರ್‌ಪರಿಶೀಲಿಸಲಾಗಿದೆ ಮತ್ತು ಠೇವಣಿದಾರನ ಮರಣಾನಂತರ ಕ್ಲೇಮುಗಳನ್ನು ತ್ವರಿತವಾಗಿ ಮತ್ತು ಯಾವುದೇ ಅಡೆತಡೆಗಳಿಲ್ಲದಂತೆ ಚುಕ್ತಾ ಮಾಡುವುದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಈ ವಿಷಯದ ಬಗೆಗಿನ ಈ ಮುಂಚಿನ ಎಲ್ಲ ಸುತ್ತೋಲೆಗಳನ್ನು ರದ್ದುಪಡಿಸಿ ಈ ಮುಂದಿನ ಸೂಚನೆಗಳನ್ನು ನೀಡಲಾಗಿದೆ.

**2. ಠೇವಣಿ ಖಾತೆಗಳಲ್ಲಿನ ಶಿಲ್ಕನ್ನು ಪಡೆಯುವ ಅವಕಾಶ**
**(ಎ) ಬದುಕಿರುವ ವಾರಸುದಾರ / ನಾಮನಿರ್ದೇಶಿತರ ಕ್ಲಾಸ್ ಹೊ0ದಿರುವ ಖಾತೆಗಳು**

2.1 ನಿಮಗೆ ತಿಳಿದಿರುವಂತೆ ಠೇವಣಿದಾರನು ನಾಮ ನಿರ್ದೇಶನ ಸೌಲಭ್ಯ ಬಳಸಿಕೊಂಡಿರುವ ಮತ್ತು ನಾಮ ನಿರ್ದೇಶನ ಮಾಡಿರುವ ಠೇವಣಿ ಖಾತೆಗಳ ವಿಷಯದಲ್ಲಿ ಅಥವಾ ಜೀವಂತ ವಾರಸುದಾರಿಕೆಯ ಖಂಡದೊಂದಿಗೆ ಖಾತೆಯನ್ನು ತೆರೆದಿರುವಲ್ಲಿ ( ಇಬ್ಬರೂ ಅಥವಾ ಬದುಕಿರುವ ಸದಸ್ಯ, ಅಥವಾ : ಯಾರೇ ಒಬ್ಬರು ಅಥವಾ ಬದುಕಿರುವ ವಾರಸುದಾರ' ಅಥವಾ " ಮೊದಲನೆಯವ ಅಥವಾ ಬದುಕಿರುವ ಸದಸ್ಯ' ಅಥವಾ ತರುವಾಯದವ ಅಥವಾ ಬದುಕಿರುವ ವಾರಸುದಾರ') ಮೃತ ಠೇವಣಿ ಖಾತೆದಾರನ ಜೀವಂತ ವಾರಸುದಾರನಿಗೆ / (ರಿಗೆ)/ ನಾಮ

ನಿರ್ದೇಶಿತನಿಗೆ ಠೇವಣಿ ಖಾತೆಯಲ್ಲಿನ ಶಿಲ್ಕನ್ನು ಸಂದಾಯ ಮಾಡುವುದು ಬ್ಯಾಂಕ್‌ನ ಹೊಣೆಗಾರಿಕೆಯನ್ನು ಮಾನ್ಯವಾದ ರೀತಿಯಲ್ಲಿ ನೆರವೇರಿಸುವುದನ್ನು ಪ್ರತಿನಿಧಿಸುತ್ತದೆ, ಆದರೆ:
(ಎ) ಬ್ಯಾಂಕು ಸೂಕ್ತ ದಸ್ತಾವೇಜು ಸಾಕ್ಷ್ಯದ ಮೂಲಕ ಜೀವಂತ ವಾರಸುದಾರನ (ರ)/ ನಾಮ ನಿರ್ದೇಶಿತನ ಗುರುತನ್ನು ಸ್ಥಿರಪಡಿಸಿಕೊಳ್ಳುವಲ್ಲಿ ಮತ್ತು ಖಾತೆದಾರನ ಮರಣದ ಸಂಗತಿಯನ್ನು ದೃಢಪಡಿಸಿಕೊಳ್ಳುವಲ್ಲಿ ಯುಕ್ತ ಜಾಗರೂಕತೆ ಮತ್ತು ಎಚ್ಚರಿಕೆ ವಹಿಸಬೇಕು;
(ಬಿ) ಮೃತನ ಖಾತೆಯಿಂದ ಹಣ ಸಂದಾಯ ಮಾಡುವುದರಿಂದ ಬ್ಯಾಂಕನ್ನು ನಿರ್ಬಂಧಿಸುವಂತಹ ಸಕ್ಷಮ ನ್ಯಾಯಾಲಯದ ಯಾವುದೇ ಆದೇಶ ಇಲ್ಲ; ಮತ್ತು
(ಸಿ) ಮೃತ ಠೇವಣಿದಾರನ ಕಾನೂನು ಸಮ್ಮತ ವಾರಸುದಾರನ ಟ್ರಸ್ಟಿಯಾಗಿ ಬ್ಯಾಂಕಿನಿಂದ ಬದುಕಿರುವ ವಾರಸುದಾರನಿಗೆ (ರಿಗೆ) ನಾಮನಿರ್ದೇಶಿತನಿಗೆ ಆತ ಹಣ ಪಡೆಯಬಹುದೆ0ಬುದನ್ನು ಸ್ಪಷ್ಟಪಡಿಸಲಾಗಿದೆ ಅಂದರೆ ಆತನಿಗೆ ಮಾಡುವ ಅಂತಹ ಸಂದಾಯವು, ಹಣವನ್ನು ಸಂದಾಯ ಮಾಡಿರುವ ಜೀವಂತ ವಾರಸುದಾರನ (ರ) / ನಾಮ ನಿರ್ದೇಶಿತನ ವಿರುದ್ಧ ಯಾರೇ ವ್ಯಕ್ತಿಯು ಹೊಂದಿರುವ ಹಕ್ಕಿಗೆ ಅಥವಾ ಕ್ಲೇಮಿಗೆ ಬಾಧಕವಾಗತಕ್ಕದ್ದಲ್ಲ.

2.2 ಹಿಂದೆ ಹೇಳಿದ ಷರತ್ತಿಗೊಳಪಟ್ಟು ಜೀವಂತ ವಾರಸುದಾರನಿಗೆ (ರಿಗೆ) / ನಾಮ ನಿರ್ದೇಶಿತನಿಗೆ ಮಾಡಿದ ಹಣ ಸಂದಾಯವು ಬ್ಯಾಂಕಿನ ಹೊಣೆಯನ್ನು ಪೂರ್ಣವಾಗಿ ನೆರವೇರಿಸುವುದಾಗಿರುವುದರಿಂದ ಕಾನೂನು ಸಮ್ಮತ ಪ್ರಾತಿನಿಧ್ಯವನ್ನು ಹಾಜರುಪಡಿಸುವಂತೆ ಒತ್ತಾಯಿಸುವುದು ಅನಾವಶ್ಯಕ ಮತ್ತು ಆಧಾರ ರಹಿತ ಮತ್ತು ಜೀವಂತ ವಾರಸುದಾರನಿಗೆ (ರಿಗೆ) / ನಾಮ ನಿರ್ದೇಶಿತನಿಗೆ ಪೂರ್ಣವಾಗಿ ತಪ್ಪಿಸಬಹುದಾದ ಅನಾನುಕೂಲ ಉಂಟು ಮಾಡುವುದಷ್ಟೇ ಆಗುತ್ತದೆ ಮತ್ತು ಆದ್ದರಿಂದ ಗಂಭೀರ ಸ್ವರೂಪದ ಉಸ್ತುವಾರಿ ಹಂತದ ಅನುಮೋದನೆಗೆ ಅವಕಾಶ ನೀಡುತ್ತದೆ. ಆದ್ದರಿಂದ ಅಂಥ ಸ0ದರ್ಭದಲ್ಲಿ, ಮೃತ ಠೇವಣಿದಾರನ ಜೀವಂತ ವಾರಸುದಾರನಿಗೆ (ರಿಗೆ) / ನಾಮ ನಿರ್ದೇಶಿತನಿಗೆ ಹಣ ಸಂದಾಯ ಮಾಡುವಾಗ, ಉತ್ತರಾಧಿಕಾರ ಪ್ರಮಾಣ ಪತ್ರ ಅಧಿಕಾರ ಪತ್ರ ಅಥವಾ ಅಂತಿಮ ಇಷ್ಟ ಪತ್ರ ಮೊದಲಾದವುಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವುದನ್ನು ಅಥವಾ ಬದುಕಿರುವ ವಾರಸುದಾರನಿಂದ ( ರಿಂದ) / ನಾಮ ನಿರ್ದೇಶಿತನಿಂದ ಯಾವುದೇ ನಷ್ಟ ಭರ್ತಿ ಬಾಂಡನ್ನು ಅಥವಾ ಭದ್ರತೆಯನ್ನು ಪಡೆಯುವುದನ್ನು ಕೈ ಬಿಡಬೇಕೆಂದು ಮೃತ ಖಾತೆದಾರನ ಲೆಕ್ಕದಲ್ಲಿ ಇರುವ ಹಣವನ್ನು ಈ ಸಂಬಂಧದಲ್ಲಿ ಗಣನೆಗೆ ತೆಗೆದುಕೊಳ್ಳಬಾರದೆಂದು ಬ್ಯಾಂಕುಗಳಿಗೆ ತಿಳಿಸಲಾಗಿದೆ.

**ಬಿ) ಜೀವಂತ ವಾರಸುದಾರ / ನಾಮ ನಿರ್ದೇಶಿತರ ಕ್ಲಾಸ್ ಇಲ್ಲದ ಖಾತೆಗಳು**

2.3 ಮೃತ ಠೇವಣಿದಾರನು ಯಾವುದೇ ನಾಮ ನಿರ್ದೇಶನವನ್ನು ಮಾಡದಿರುವ ಸಂದರ್ಭದಲ್ಲಿ ಅಥವಾ "ಉಭಯತ್ರರು ಅಥವಾ ಜೀವಂತ ಸದಸ್ಯ" ಎಂದು ( ಒಬ್ಬರೇ ಅಥವಾ ಜಂಟಿಯಾಗಿ ನಿರ್ವಹಿಸುವ ಖಾತೆಗಳು) ಹೆಸರಿಸಿದಂತಹವುಗಳಲ್ಲದ ಖಾತೆಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳು ಸಾಮಾನ್ಯ ಮನುಷ್ಯನಿಗೆ ಅನಾನುಕೂಲವಾಗುವುದನ್ನು ತಪ್ಪಿಸುವ ಮತ್ತು ಅನಗತ್ಯ ತೊಂದರೆಯನ್ನು ತಪ್ಪಿಸುವ ಅನಿವಾರ್ಯತೆಯನ್ನು ಗಮನದಲ್ಲಿಟ್ಟುಕೊಂಡು ಠೇವಣಿದಾರನ ಕಾನೂನು ಸಮ್ಮತ ವಾರಸುದಾರನಿಗೆ (ರಿಗೆ) ಹಣ ಸಂದಾಯ ಮಾಡುವ ಸರಳೀಕೃತ ಕಾರ್ಯ ವಿಧಾನವನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಈ ಸಂದರ್ಭದಲ್ಲಿ ಬ್ಯಾಂಕುಗಳು ತಮ್ಮ ಸಂಭವನೀಯ ಆಪಾಯ ನಿರ್ವಹಣಾ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ನಷ್ಟ ಭರ್ತಿ ಪತ್ರವನ್ನು

ಹೊರತುಪಡಿಸಿ ಯಾವುದೇ ದಾಖಲೆಯನ್ನು ಹಾಜರುಪಡಿಸುವಂತೆ ಒತ್ತಾಯಿಸದೆ ಮೃತ ಠೇವಣಿದಾರನಿಗೆ ಸಂಬಂಧಿಸಿದಂತೆ ಯಾವ ಪ್ರಮಾಣದವರೆಗೆ ಕ್ಲೇಮುಗಳನ್ನು ಚುಕ್ತಾ ಮಾಡಬಹುದೋ ಅಂಥ ಕನಿಷ್ಠ ಪ್ರಾರಂಭದ ಮಿತಿಯನ್ನು ಮೃತ ಠೇವಣಿದಾರರ ಖಾತೆಯಲ್ಲಿನ ಶಿಲ್ಕಿಗೆ ಸಂಬಂಧಿಸಿದಂತೆ ನಿಗದಿಪಡಿಸಬಹುದು.

**3. ಸಾವಧಿ ಠೇವಣಿ ಖಾತೆಗಳನ್ನು ಅವಧಿ ತುಂಬುವುದಕ್ಕೆ ಮೊದಲೇ ಕೊನೆಗೊಳಿಸುವುದು:**

ಸಾವಧಿ ಠೇವಣಿಗಳ ವಿಷಯದಲ್ಲಿ, ಠೇವಣಿದಾರನು ಮರಣ ಹೊಂದಿದ ಸಂದರ್ಭದಲ್ಲಿ ಸಾವಧಿ ಠೇವಣಿಗಳನ್ನು ಅವಧಿ ತುಂಬುವುದಕ್ಕೆ ಮೊದಲೇ ಕೊನೆಗೊಳಿಸುವುದಕ್ಕೆ ಅನುಮತಿಸಲಾಗುವುದು ಎಂಬ ಮಟ್ಟಿಗೆ ಒಂದು ಕ್ಲಾಸನ್ನು ಖಾತೆಯನ್ನು ತೆರೆಯುವ ನಮೂನೆಯಲ್ಲೇ ಸೇರಿಸುವಂತೆ ಅಂಥ ಅವಧಿ ತುಂಬುವುದಕ್ಕೆ ಮೊದಲೇ ಹಣ ಹಿಂಪಡೆಯುವುದಕ್ಕೆ ಯಾವ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗುವುದೋ ಆ ಷರತ್ತುಗಳನ್ನು ಸಹಾ ಖಾತೆಯನ್ನು ತೆರೆಯುವ ನಮೂನೆಯಲ್ಲಿ ನಿರ್ದಿಷ್ಟಪಡಿಸುವಂತೆ ಬ್ಯಾಂಕುಗಳಿಗೆ ತಿಳಿಸಲಾಗಿದೆ. ಅವಧಿ ತುಂಬುವುದಕ್ಕೆ ಮೊದಲೇ ಹಾಗೆ ಹಣ ಹಿಂಪಡೆಯುವುದಕ್ಕೆ ಯಾವುದೇ ದಂಡ ವಿಧಿಸಲಾಗುವುದಿಲ್ಲ.

**4. ಮೃತ ಠೇವಣಿದಾರನ ಹೆಸರಿನಲ್ಲಿ ನಡೆಯುವ ವ್ಯವಹಾರ:**

- ಠೇವಣಿ ಖಾತೆಯ ಜೀವಂತ ವಾರಸುದಾರನಿಗೆ (ರಿಗೆ) / ನಾಮ ನಿರ್ದೇಶಿತನಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಸಲುವಾಗಿ, ಮೃತ ಖಾತೆದಾರನ ಹೆಸರಿನಲ್ಲಿ ನಡೆಯುವ ವ್ಯವಹಾರಗಳ ಸರಣಿಗೆ ಸಂಬಂಧಿಸಿದಂತೆ ಜೀವಂತ ವಾರಸುದಾರನಿಂದ ( ರಿಂದ) / ನಾಮ ನಿರ್ದೇಶಿತನಿಂದ ಸೂಕ್ತ ಒಪ್ಪಂದ ಪತ್ರವನ್ನು / ಅಧಿಕಾರ ಪತ್ರವನ್ನು ಪಡೆದುಕೊಳ್ಳುವಂತೆ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿದೆ. ಈ ಸಂಬಂಧದಲ್ಲಿ, ಈ ಮುಂದಿನ ಮಾರ್ಗಗಳಲ್ಲಿ ಒಂದನ್ನು ಅಳವಡಿಸಿಕೊಳ್ಳುವ ಬಗ್ಗೆ ಬ್ಯಾಂಕುಗಳು ಪರಿಗಣಿಸಬಹುದು:

- • ಮೃತ ಖಾತೆದಾರನ ಜೀವಂತ ವಾರಸುದಾರ (ರು) / ನಾಮ ನಿರ್ದೇಶಿತನು, ಮೃತ ಶ್ರೀ ----------- ಇವರ ಸಂಪತ್ತು ಎಂಬ ಹೆಸರಿನ ಖಾತೆಯನ್ನು ತೆರೆಯುವುದಕ್ಕೆ ಬ್ಯಾಂಕಿಗೆ ಅಧಿಕಾರ ನೀಡಬಹುದು. ಈ ಖಾತೆಯಲ್ಲಿ ಖಾತೆದಾರನ ಹೆಸರಿನಲ್ಲಿ ಹರಿದುಬರುವ ಎಲ್ಲ ಹಣವನ್ನು ಜಮೆ ಮಾಡಲು ಅನುಮತಿಸಬಹುದು. ಆದರೆ ಖಾತೆಯಿಂದ ಯಾವುದೇ ಹಣ ತೆಗೆಯಲಾಗುವುದಿಲ್ಲ.

ಅಥವಾ

- • ಜೀವಂತ ವಾರಸುದಾರ (ರು) / ನಾಮನಿರ್ದೇಶಿತನು ಖಾತೆಗೆ ಹರಿದುಬರುವ ಹಣವನ್ನು "ಖಾತೆದಾರನ ಮೃತನಾಗಿದ್ದಾನೆ" ಎಂಬ ಷರಾದೊಂದಿಗೆ ಜಮೆ ಮಾಡುವವನಿಗೆ ಹಿಂದಿರುಗಿಸಲು ಮತ್ತು ಅದರಂತೆ ಜೀವಂತ ವಾರಸುದಾರನಿಗೆ (ರಿಗೆ) / ನಾಮ ನಿರ್ದೇಶಿತನಿಗೆ ತಿಳಿಸಲು ಬ್ಯಾಂಕಿಗೆ ಅಧಿಕಾರ ನೀಡಬಹುದು. ಆ ತರುವಾಯ ಜೀವಂತ ವಾರಸುದಾರನು (ರು) / ನಾಮ ನಿರ್ದೇಶಿತನು / ಕಾನೂನು ಸಮ್ಮತ ವಾರಸುದಾರನು ಹಣ ರವಾನೆ ಮಾಡುವವರನ್ನು ಸಂಪರ್ಕಿಸಿ ಸೂಕ್ತ ಫಲಾನುಭವಿಯ ಹೆಸರಿಗೆ

ನೆಗೋಷಿಯಬಲ್ ಇನ್ಸ್ಟ್ರುಮೆನ್ಟ್ಸ್ ಮೂಲಕ ಹಣ ಸಂದಾಯ ಮಾಡುವಂತೆ ಮಾಡಬಹುದು.

**5. ಸೇಫ್ ಡಿಪಾಸಿಟ್ ಲಾಕರುಗಳು / ಸೇಫ್ ಕಸ್ಟಡಿಯಲ್ಲಿಟ್ಟಿರುವ ವಸ್ತುಗಳನ್ನು ಪಡೆಯುವ ಅವಕಾಶ**

ಮೃತ ಲಾಕರ್ ಬಾಡಿಗೆದಾರನ / ಸುರಕ್ಷಿತ ಅಭಿರಕ್ಷೆಯಲ್ಲಿ ವಸ್ತುಗಳನ್ನು ಇಟ್ಟಿರುವವನ ನಾಮ ನಿರ್ದೇಶಿತನಿಂದ (ರಿಂದ) ( ಅಂಥ ನಾಮನಿರ್ದೇಶನವನ್ನು ಮಾಡಿರುವಲ್ಲಿ) ಅಥವಾ ಮೃತನ ಜೀವಂತ ವಾರಸುದಾರನಿಂದ (ರಿಂದ) ( ಲಾಕರ್ ನಲ್ಲಿ / ಸುರಕ್ಷಿತ ಅಭಿರಕ್ಷೆಯಲ್ಲಿ ಇರುವ ವಸ್ತುಗಳನ್ನು ಉತ್ತರಾಧಿಕಾರಿತ್ವ ಕ್ಲಾಸಿನ ಮೇರೆಗೆ ಪಡೆಯಲು ಅವಕಾಶವಿರುವಲ್ಲಿ) ಲಾಕರ್ ಬಾಡಿಗೆದಾರನ / ವಸ್ತುಗಳನ್ನು ಠೇವಣಿ ಇಟ್ಟಿರುವವನ ಮರಣಾಂತರ ಲಾಕರ್‌ನಲ್ಲಿರುವ / ಸುರಕ್ಷಿತ ಅಭಿರಕ್ಷೆಯಲ್ಲಿರುವ ವಸ್ತುಗಳನ್ನು ಪಡೆಯುವ ಅವಕಾಶ ನೀಡುವಂತೆ ಕೋರಿ ಬಂದ ಕೋರಿಕೆಗಳ ಬಗ್ಗೆ ವ್ಯವಹರಿಸುವುದಕ್ಕೆ, ಠೇವಣಿ ಖಾತೆಗಳಲ್ಲಿ ಸೂಚಿಸಿರುವಂತೆ ಹಿಂದೆ ಹೇಳಿರುವ ಮಾರ್ಗವನ್ನು ಅಗತ್ಯ ಬದಲಾವಣೆಗಳೊಂದಿಗೆ ಸಾಮಾನ್ಯವಾಗಿ ಅಳವಡಿಸಿಕೊಳ್ಳುವಂತೆ ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ. ಆದರೆ, ಈ ಸಂಬಂಧದಲ್ಲಿ ವಿವರವಾದ ಮಾರ್ಗದರ್ಶಿ ಸೂಚಿಗಳನ್ನು ಪ್ರತ್ಯೇಕವಾಗಿ ನೀಡಲಾಗುತ್ತಿದೆ.

**6. ಬೇಡಿಕೆಗಳನ್ನು ಚುಕ್ತಾ ಮಾಡುವುದಕ್ಕೆ ಸಮಯ ಮಿತಿ:**

ಮೃತ ಠೇವಣಿದಾರರುಗಳ ಸಂಬಂಧದಲ್ಲಿ ಬರುವ ಬೇಡಿಕೆಗಳನ್ನು, ಬೇಡಿಕೆ ಸ್ವೀಕರಿಸಿದ ದಿನಾಂಕದಿಂದ 15 ದಿವಸಗಳನ್ನು ಮೀರದ ಅವಧಿಯೊಳಗೆ, ಠೇವಣಿದಾರನ ಮರಣದ ರುಜುವಾತನ್ನು ಮತ್ತು ಬೇಡಿಕೆ (ಗಳ ) ಸೂಕ್ತ ಗುರುತನ್ನು ಬ್ಯಾಂಕಿಗೆ ತೃಪ್ತಿಯಾಗುವಂತೆ ಹಾಜರುಪಡಿಸುವುದಕ್ಕೆ ಒಳಪಟ್ಟು ಚುಕ್ತಾ ಮಾಡುವಂತೆ ಬ್ಯಾಂಕುಗಳಿಗೆ ತಿಳಿಸಲಾಗಿದೆ. ಬ್ಯಾಂಕುಗಳು, ಮೃತ ಠೇವಣಿದಾರರುಗಳ / ಲಾಕರ್ ಬಾಡಿಗೆದಾರ / ಸುರಕ್ಷಿತ ಅಭಿರಕ್ಷೆಯಲ್ಲಿಟ್ಟಿರುವ ವಸ್ತುಗಳ ಠೇವಣಿದಾರರುಗಳ ಖಾತೆಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಬೇಡಿಕೆಗಳ ಸಂಖ್ಯೆಯ ವಿವರಗಳನ್ನು ಮತ್ತು ಗೊತ್ತುಪಡಿಸಿದ ಅವಧಿಯ ನಂತರವೂ ಬಾಕಿ ಉಳಿದಿರುವಂಥ ಬೇಡಿಕೆಗಳ ವಿವರಗಳನ್ನು, ಬಾಕಿ ಉಳಿದಿರುವುದಕ್ಕೆ ಕಾರಣಗಳ ಸಹಿತ ಸೂಕ್ತ ಸಮಯಾಂತರಗಳಲ್ಲಿ ನಿರಂತರವಾಗಿ ಮಂಡಳಿಯ ಗ್ರಾಹಕ ಸೇವಾ ಸಮಿತಿಗೆ ವರದಿ ಮಾಡತಕ್ಕದ್ದು.

**7. ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ ಉಪಬಂಧಗಳು**

ಈ ಸಂಬಂಧದಲ್ಲಿ, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 ರ 45 ಝಡ್‌ಎಯಿಂದ 45 ಝಡ್‌ಎಫ್ ವರೆಗಿನ ಪ್ರಕರಣಗಳ ಕಡೆಗೆ ಗಮನ ಸೆಳೆಯಲಾಗಿದೆ.

**8. ಸರಳೀಕೃತ ಆಪರೇಷನಲ್ ವ್ಯವಸ್ಥೆಗಳು / ಕಾರ್ಯವಿಧಾನಗಳು:**

ಹಲವಾರು ಸನ್ನಿವೇಶಗಳಲ್ಲಿ ಮೃತ ಗ್ರಾಹಕ ಸದಸ್ಯ ಬೇಡಿಕೆಗಳನ್ನು ಚುಕ್ತಾ ಮಾಡುವುದಕ್ಕೆ ಬ್ಯಾಂಕುಗಳು ಅಳವಡಿಸಿಕೊಳ್ಳುವುದಕ್ಕಾಗಿ ಈ ಸುತ್ತೋಲೆಯಲ್ಲಿ ಒಳಗೊಂಡಿರುವ ಸೂಚನೆಗಳಿಗೆ

ಸುಸಂಗತವಾದ ಮಾದರಿ ಪ್ರಕ್ರಿಯಾ ಕಾರ್ಯ ವಿಧಾನವನ್ನು (ಎಂಒಪಿ) ರೂಪಿಸುವಂತೆ ನಬಾರ್ಡ್‌ಗೆ ಸೂಚಿಸಲಾಗಿದೆ. ಆದ್ದರಿಂದ ಅನ್ವಯಿಸುವಂಥ ಶಾಸನಾತ್ಮಕ ಉಪಬಂಧಗಳನ್ನು, ಹಿಂದೆ ತಿಳಿಸಿದ ಸೂಚನೆಗಳನ್ನು ಹಾಗೂ ನಬಾರ್ಡ್ ರೂಪಿಸುವಂತಹ ಎಂಒಪಿ ಯನ್ನು ಗಣನೆಗೆ ತೆಗೆದುಕೊಂಡು, ತಮ್ಮ ಮಂಡಳಿಯ ಅನುಮೋದನೆ ಪಡೆದುಕೊಂಡು ತಮ್ಮ ಮೃತ ಗ್ರಾಹಕರ ( ಅಂದರೆ ಠೇವಣಿದಾರರು / ಲಾಕರ್ ಬಾಡಿಗೆದಾರರು / ಸುರಕ್ಷಿತ ಅಭಿರಕ್ಷೆಯಲ್ಲಿ ವಸ್ತುಗಳನ್ನಿಟ್ಟಿರುವವರು) ಬೇಡಿಕೆಗಳನ್ನು ಚುಕ್ತಾ ಮಾಡುವ ಉದ್ದೇಶಕ್ಕಾಗಿ ಸರಳೀಕೃತ ನೀತಿಯನ್ನು / ಕಾರ್ಯ ವಿಧಾನವನ್ನು ರೂಪಿಸುವ ದೃಷ್ಟಿಯಿಂದ ಆ ಉದ್ದೇಶಕ್ಕೆ ಸಂಬಂಧಿಸಿದ ತಮ್ಮ ವಿಸ್ತಾರವಾದ ವ್ಯವಸ್ಥೆಗಳನ್ನು ಮತ್ತು ಕಾರ್ಯ ವಿಧಾನಗಳನ್ನು ಸಮಗ್ರವಾಗಿ ಪುನರ್ ಪರಿಶೀಲಿಸುವಂತೆ ಬ್ಯಾಂಕುಗಳಿಗೆ ತಿಳಿಸಲಾಗಿದೆ.

**9. ಗ್ರಾಹಕರಿಗೆ ಮಾರ್ಗದರ್ಶನ ಮತ್ತು ಪ್ರಚಾರ:**

ಬ್ಯಾಂಕುಗಳು ನಾಮ ನಿರ್ದೇಶನ ಸೌಲಭ್ಯದ ಮತ್ತು ಉತ್ತರಾಧಿಕಾರಿತ್ವ ಕ್ಲಾಸ್ ಗಳ ಪ್ರಯೋಜನಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಮತ್ತು ಠೇವಣಿ ಖಾತೆದಾರರಿಗೆ ಮಾರ್ಗದರ್ಶನ ನೀಡುವಂತೆ ಅವುಗಳಿಗೆ ಸೂಚಿಸಲಾಗಿದೆ. ನಿದರ್ಶನಾರ್ಥವಾಗಿ, ಜಂಟಿ ಖಾತೆದಾರಕರಲ್ಲಿ ಒಬ್ಬರು ಮೃತಪಟ್ಟ ಸಂದರ್ಭದಲ್ಲಿ ಉತ್ತರಾಧಿಕಾರಿತ್ವ ಇದ್ದ ಹೊರತು ಠೇವಣಿಯ ಹುಟ್ಟುವಳಿಯ ಹಕ್ಕು ಜೀವಂತ ಜಂಟಿ ಖಾತೆದಾರನಿಗೆ ತನ್ನಿಂತಾನೆ ವರ್ಗಾವಣೆಯಾಗುವುದಿಲ್ಲ ಎಂಬುದನ್ನು ಪ್ರಚಾರ ವಿಷಯ ಸಾಮಗ್ರಿಯಲ್ಲಿ ಒತ್ತಿ ಹೇಳಿರಬೇಕು.

10. ಈ ಸೂಚನೆಗಳನ್ನು ಮೃತ ಠೇವಣಿದಾರರುಗಳ ಬದುಕಿರುವ ವಾರಸುದಾರನಿಗೆ (ರಿಗೆ ನಾಮ ನಿರ್ದೇಶಿತನಿಗೆ (ರಿಗೆ) ಒದಗಿಸುವ ಗ್ರಾಹಕ ಸೇವೆಗಳ ಗುಣಮಟ್ಟದಲ್ಲಿ ಗಮನಾರ್ಹವಾದ ಸುಧಾರಣೆಯನ್ನು ತರುವುದಕ್ಕೆ ತುಂಬಾ ನಿರ್ಣಾಯಕವಾದ ಘಟಕಾಂಶವಾಗಿ ಪರಿಭಾವಿಸಬೇಕು.

11. ತಲುಪಿದ್ದಕ್ಕೆ ದಯವಿಟ್ಟು ನಮ್ಮ ಸಂಬಂಧಪಟ್ಟ ಪ್ರಾದೇಶಿಕ ಕಚೇರಿಗೆ ಸ್ವಿಕೃತಿ ನೀಡಿ

**ತಮ್ಮ ವಿಶ್ವಾಸಿ,**
**( ಸಿ. ಎಸ್. ಮೂರ್ತಿ)**
**ಮುಖ್ಯ ಪ್ರಧಾನ ವ್ಯವಸ್ಥಾಪಕ– ಪ್ರಭಾರ**